4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬೆಳಗಾವಿ ಇವರ ನ್ಯಾಯಾಲಯದಲ್ಲಿ,
ಮುಕ್ಕಾಂಃ ಬೆಳಗಾವಿ.

<u>ಸ್ಪೇಷಲ್ ಕೇಸ್ ನಂಃ 533/2019</u>

1) ಕರ್ನಾಟಕ ಸರ್ಕಾರದ ಪರವಾಗಿ
ಬ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ, ಬೆಳಗಾವಿ.

- - - ಫಿರ್ಯಾದಿ

<u>ವಿರುದ್ಧ</u>

1) ಶ್ರೀ.ಭೀಮಪ್ಪಾ ರಾಮಪ್ಪಾ ಜಾದವ
ವಯಸ್ಸುಃ ವರ್ಷ, ಹಿರಿಯ ಕಾರ್ಮಿಕ ನಿರೀಕ್ಷಕರು,
4 ನೇ ವೃತ್ತ ಬೆಳಗಾವಿ

2) ಶ್ರೀ. ಯೋಗೇಂದ್ರ ಪಿತ್ತಪ್ಪಾ ರಾಠೋಡ ,
ವಯಸ್ಸುಃ ವರ್ಷ, ಡಿ ದರ್ಜೆ ನೌಕರ,
ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿ, ಬೆಳಗಾವಿ

- - - ಆರೋಪಿತರು

<u>ದೋಷಾರೋಪಣೆ</u>

ನಾನು ಮೋಹನ ಪ್ರಭು, ಎಂ.ಎ. ಎಲ್.ಎಲ್.ಎಂ. 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಬೆಳಗಾವಿ ಈ ಮೂಲಕ ಆರೋಪಿತನಾದ

1) ಶ್ರೀ.ಭೀಮಪ್ಪಾ ರಾಮಪ್ಪಾ ಜಾದವ
ವಯಸ್ಸುಃ ವರ್ಷ, ಹಿರಿಯ ಕಾರ್ಮಿಕ ನಿರೀಕ್ಷಕರು,
4 ನೇ ವೃತ್ತ ಬೆಳಗಾವಿ

2)ಶ್ರೀ. ಯೋಗೇಂದ್ರ ಪಿತ್ತಪ್ಪಾ ರಾಠೋಡ ,
ವಯಸ್ಸುಃ ವರ್ಷ, ಡಿ ದರ್ಜೆ ನೌಕರ,
ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿ, ಬೆಳಗಾವಿ

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

1 ನೇ ಆರೋಪಿ ಆದ ನೀವು ಹಿರಿಯ ಕಾರ್ಮಿಕ ನಿರೀಕ್ಷಕರೆಂದು ಹಾಊ 2 ನೇ ಆರೋಪಿ ನೀವು ಡಿ ದರ್ಜೆ ನೌಕರ ಜವಾನನೆಂದು ಕರ್ತವ್ಯ ನಿರ್ವಹಿಸುತ್ತಿದ್ದು,

ಲೋಕನೌಕರರಾಗಿದ್ದು, ದಿನಾಂಕ 19.06.2018 ರಂದು 1ನೇ ಆರೋಪಿಯಾದ ನೀವು ಈ ಕೇಸಿನ ಪಿರ್ಯಾದಿಯು ಪಾಲುದಾರಿಕೆಯಿಂದ ನಡೆಸುತ್ತಿದ್ದ ರಸೊಯಿ ದಿ ಪಂಜಾಬಿ ಕಿಚನ್, ಆರ್‌ಪಿಡಿ ಕ್ರಾಸ , ಖಾನಾಪೂರ ರಸ್ತೆ, ತಿಲಕವಾಡಿ ಬೆಳಗಾವಿಯಲ್ಲಿರುವ ಆಶ್ರಯ ಏಂಪಾಯರ ಕಟ್ಟಡದ ನೆಲ ಮಹಡಿಯಲ್ಲಿ ನಡೆಸುತ್ತಿದ್ದ ರಸೊಯಿ ದಿ ಪಂಜಾಬಿ ಕಿಚನ್ ಎನ್ನುವ ಹೊಟೇಲಗೆ ಹೋಗಿ ಎಲ್ಲರೂ ಪ್ರತಿ ತಿಂಗಳು ರೂ.1000/- ಹಾಗೂ ವರ್ಷಕ್ಕೆ ರೂ.10,000/- ಹಣ ನೀಡುತ್ತಾರೆ ನೀವು ಕೋಡಿ ಅಂತಾ ಪಿರ್ಯಾದಿದಾರರಿಗೆ ತಿಳಿಸಿದ್ದು ಆಗ ಪಿರ್ಯಾದಿದಾರು ಅಷ್ಟು ಹಣ ಇಲ್ಲವೆಂದು ಹೇಳಿದ್ದು ಆಗ 1ನೇ ಆರೋಪಿ ನೀವು ಆಮೇಲೆ ಬರುವುದಾಗಿ ಹೇಳಿ ಹೋಗಿದ್ದು, ನಂತರ ದಿನಾಂಕ 06.07.2018 ರಂದು 2ನೇ ಆರೋಪಿಯಾದ ನೀವು ಪಿರ್ಯಾದಿಯ ಹೊಟೇಲಗೆ ಬಂದು ನಮ್ಮ ಸಾಹೇಬರಾದ 1ನೇ ಆರೋಪಿ ಜನವರಿಯಿಂದ ಇಲ್ಲಿಯವರೆಗೆ 6 ತಿಂಗಳದ್ದು ರೂ.6000/- ಮತ್ತು ಇನ್ನು ಮುಂದೆ ಪ್ರತಿ ತಿಂಗಳು ರೂ.1000/- ಅಥವಾ ವರ್ಷಕ್ಕೆ ಒಂದು ಸಲ ರೂ.10,000/- ನೀಡಲು ಹೇಳಿದ್ದು ಅದನ್ನು ಕೊಡುವಂತೆ ಪಿರ್ಯಾದಿಗೆ ಒತ್ತಾಯಿಸಿದ್ದು ಆಗ ಪಿರ್ಯಾದಿದಾರರು ಕಡಿಮೆ ಮಾಡಲು ವಿನಂತಿಸಿಕೊಂಡಾಗ ರೂ.3000/-ಲಂಚ ನೀಡುವಂತೆ ನೀವು ಒತ್ತಾಯಿಸಿದ್ದು, ಈ ರೀತಿ ಪಿರ್ಯಾದಿಗೆ ಲಂಚ ಕೊಡಲು ಮನಸ್ಸು ಇಲ್ಲದೇ ಇದುದ್ದರಿಂದ ಅವರು ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ ಠಾಣೆ ಬೆಳಗಾವಿ ಇಲ್ಲಿಗೆ ದಿನಾಂಕ 17.07.2018 ರಂದು ನೀಡಿದ ದೂರಿನ ಮೇರೆಗೆ ನಿಮ್ಮ ವಿರುದ್ಧ ಪ್ರಕರಣ ಸಂಖ್ಯೆ 9/2018 ರಡಿಯಲ್ಲಿ ಪ್ರಕರಣ ದಾಖಲಾಗಿದ್ದು ಎಸಿಬಿಯ ಪೊಲೀಸ ಇನ್ಸಪೆಕ್ಟರವರು ಟ್ರ್ಯಾಪ ಪೂರ್ವದ ಪಂಚನಾಮೆ ಎಲ್ಲಾ ಅವಚೂತ್ಯಪೂರ್ವ ನಡವಳಿ ನಿರ್ವಹಿಸಿದ ನಂತರ ಪಿರ್ಯಾದಿ, ಪಂಚ ಸಾಕ್ಷಿಗಳು ಮತ್ತು ಸಿಬ್ಬಂದಿಯನ್ನು ಪಿರ್‌ಯಾದಿಯ ಹೊಟೇಲ ಬಳಿ ಕರೆದುಕೊಂಡು ಹೋಗಿದ್ದು ಪಿರ್ಯಾದಿ ಹಾಗೂ ಪಂಚ ಸಾಕ್ಷಿ 1 ರವರಿಗೆ ಪಿರ್ಯಾದಿ ಹೊಟೇಲಗೆ ಕಳುಹಿಸಿದ್ದು ಆಗ 2ನೇ ಆರೋಪಿ ನೀವು ಹೊಟೇಲಗೆ ಬಂದು 'ಸಾಹೇಬರು ಹೇಳಿರುತ್ತಾರೆ ನಿಮ್ಮಿಂದ ಹಣ ಪಡೆದುಕೊಳ್ಳಲು ಎಂದು ಹೇಳಿದಾಗ ಪಿರ್ಯಾದಿಯು ತನ್ನ ಬಳಿ ಇದ್ದ ಫಿನಾಪ್ತಲಿನ ಸವರಿದ ರೂ.3000/- ಹಣ ನೀಡಲು ಹೋದಾಗ ಇಲ್ಲ ರೂ.4000/- ಅಂತಾ ಹೇಳಿದ್ದು, ಆಗ ಪಿರ್ಯಾದಿ ಇಲ್ಲ ನೀನ್ನೇ ನಿಮ್ಮ ಸಾಹೇಬರಿಗೆ ರೂ.3000/- ಕೊಡುವುದಾಗಿ ತಿಳಿಸಿರುತ್ತೇನೆಂದು ಹೇಳಿದಾಗ 2ನೇ ಆರೋಪಿ ನೀವು ಪಿರ್ಯಾದಿಯಿಂದ ಫಿನಾಪ್ತಲಿನ ಸವರಿದ ರೂ.3000/- ಹಣವನ್ನು ಪಡೆದು ನಿಮ್ಮ ಎರಡು ಕೈಗಳಿಂದ ಏಣಿಸಿ ನೀವು ತಂದಿದ್ದ ಕಪ್ಪು ಬಣ್ಣದ ಹ್ಯಾಂಡ ಬ್ಯಾಗನಲ್ಲಿ ಇಟ್ಟುಕೊಂಡಾಗ ನಿಮ್ಮನ್ನು ಯಶಸ್ವಿಯಾಗಿ ಟ್ರ್ಯಾಪ ಮಾಡಲಾಗಿದ್ದು, ಆರೋಪಿತರಾದ ನೀವು ಈ ರೀತಿ ಪಿರ್ಯಾದಿಯಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟು 2ನೇ ಆರೋಪಿಯು ನೀವು ಪಿರ್ಯಾದಿಯಿಂದ ರೂ.3000/- ಲಂಚವನ್ನು ಬೇಡಿಕೆ ಇಟ್ಟು ಸ್ವೀಕರಿಸಿ ಆರೋಪಿತರಾದ

ನೀವು ಕಲಂ 7 ಲಂಚ ಪ್ರತಿಬಂಧಕ ಕಾಯ್ದೆ 1988 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಎರಡನೇಯದಾಗಿ ಲೋಕಾ ನೌಕರರಾದ ಆರೋಪಿತರಾದ ನೀವು ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದದಂದು ಅಪರಾಧ ಮನೋಭಾವನೆಯಿಂದ ನಿಮ್ಮ ಸರ್ಕಾರಿ ಹುದ್ದೆಯನ್ನು ದುರುಪಯೋಗಪಡಿಸಿ ಫಿರ್ಯಾದಿಯ ಹೊಟೇಲಗೆ ಹೋಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟು 2 ನೇ ಆರೋಪಿ ನೀವು 1 ನೇ ಆರೋಪಿ ಹಣ ಪಡೆದಕೊಳ್ಳಲು ಹೇಳಿದ್ದರೆಂದು ಹೇಳಿ ಪಿರ್ಯಾದಿಯಿಂದ ರೂ.3000/- ಲಂಚದ ಹಣ ಸ್ವೀಕರಿಸಿ ಕಲಂ 13(1)(ಡಿ) ಸಹ ಕಲಂ 13(2) ಲಂಚ ಪ್ರತಿಬಂಧಕ ಕಾಯ್ದೆ 1988 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಈ ಮೇಲಿನ ಅಪರಾಧಗಳಿಗೆ ನೀನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಬೇಕು ಅಂತಾ ಈ ಮೂಲಕ ಆದೇಶಿಸುತ್ತೇನೆ.

( ತೆರೆದ ನ್ಯಾಯಾಲಯದಲ್ಲಿ ದಿನಾಂಕ **29-01-2024** ರಂದು ನಿನ್ನ ಮೇಲೆ ಈ ಮೇಲಿನ ದೋಷಾರೋಪಣೆಯನ್ನು ಹೊರಿಸಲಾಯಿತು.)

(ಮೋಹನ ಪ್ರಭು)
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**IN THE COURT OF IV ADDL.DISTRICT AND SESSIONS JUDGE & SPECIAL JUDGE (P.C.ACT), AT : BELAGAVI**

***Special Case No.533/2019***

Complainant: The State of Karnataka

\- Versus –

Accused: : Murigeppa Shivappa Khot & another

**PLEA OF THE ACCUSED**

1) ಶ್ರೀ. ಭೀಮಪ್ಪಾ ರಾಮಪ್ಪಾ ಜಾದವ
ವಯಸ್ಸುಃ 59 ವರ್ಷ, ಹಿರಿಯ ಕಾರ್ಮಿಕ ನಿರೀಕ್ಷಕರು,
4 ನೇ ವೃತ್ತ ಬೆಳಗಾವಿ

Q.1: Have you understood the charge read over and explained to you?

Ans:

Q.2: Do you plead guilty or claim to be tried?

Ans:

(Certified that charge has been read over and explained to the accused in the language known to him and that the above statement has been taken in my presence and on my personal hearing and that it is explained to the accused)

**(Mohan Prabhu)**
IV Addl.District & Sessions Judge,
& Special Judge,Belagavi.

**<u>IN THE COURT OF IV ADDL.DISTRICT AND SESSIONS JUDGE & SPECIAL JUDGE (P.C.ACT), AT : BELAGAVI</u>**

***<u>Special Case No.533/2019</u>***

Complainant: The State of Karnataka

\- Versus –

Accused: : Bheemappa Ramappa Jadhav & another

**<u>PLEA OF THE ACCUSED</u>**

2)ಶ್ರೀ. ಯೋಗೇಂದ್ರ ಪಿತ್ತಪ್ಪಾ ರಾಠೋಡ ,
ವಯಸ್ಸುಃ 55 ವರ್ಷ, ಡಿ ದರ್ಜೆ ನೌಕರ,
ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿ, ಬೆಳಗಾವಿ

Q.1: Have you understood the charge read over and explained to you?

Ans:

Q.2: Do you plead guilty or claim to be tried?

Ans:

(Certified that charge has been read over and explained to the accused in the language known to him and that the above statement has been taken in my presence and on my personal hearing and that it is explained to the accused)

**(Mohan Prabhu)**
IV Addl.District & Sessions Judge,
& Special Judge,Belagavi.